ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
**ಸಿ.ಸಿ.ನಂ.1129/2023.**

ದಿನಾಂಕಃ**25.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಯಶ್ವಂತ್ | ಚಾಸಾ-5, ಪ್ರಾಸಾ-5 |
| ತಂದೆಯ ಹೆಸರು | ಸಿದ್ದಪ್ಪ | |
| ವಯಸ್ಸು | 36 ವರ್ಷ | |
| ಉದ್ಯೋಗ | ಚಾಲಕ ವೃತ್ತಿ | |
| ವಾಸ | ಸರಸ್ವತಿಪುರ ಗ್ರಾಮ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಮೃತ ಗಿರೀಶ್, ಚಾಸಾ 1, 4 ಗೊತ್ತು. ದಿಃ15.09.2022 ರಂದು ನಾನು ಕೆಲಸ ಮುಗಿಸಿಕೊಂಡು ಕಡೂರಿನಿಂದ ಸರಸ್ವತಿಪುರಕ್ಕೆ ನನ್ನ ಬೈಕಿನಲ್ಲಿ ಹೋಗುತ್ತಿದ್ದೆ. ನಾನು, ಮೃತ ಗಿರೀಶ್ ಮತ್ತು ಚಾಸಾ 4 ರವರು ಪ್ರತ್ಯೇಕ 3 ಬೈಕ್ ಗಳಲ್ಲಿ ಊರಿಗೆ ಹೋಗುತ್ತಿದ್ದೆವು. ನನ್ನ ಮುಂದೆ ಗಿರೀಶ್ ಹೋಗುತ್ತಿದ್ದರು. ಗಿರೀಶ್ ರವರು ಚಾಲನೆ ಮಾಡುತ್ತಿದ್ದ ಬೈಕ್ ಸಂ.ಕೆಎ 18 ಕ್ಯೂ 6077 ಆಗಿತ್ತು. ರಾತ್ರಿ ಸುಮಾರು 11.30 ಕ್ಕೆ ಕಂಸಾಗರ ಗೇಟ್ ತಲುಪಿದ್ದಾಗ ಒಂದು ಟಿಂಬರ್ ಲೋಡ್ ಲಾರಿ ಸಂಖ್ಯೆ ಕೆಎ 53 – ಎ – 4887 ರ ಲಾರಿಯು ಯಾವುದೇ ಇಂಡಿಕೇಟರ್ ಅಥವಾ ಪಾರ್ಕಿಂಗ್ ಇಂಡಿಕೇಟರ್ ಲೈಟ್ ಹಾಕದೆ ರಸ್ತೆಯಲ್ಲಿ ನಿಂತಿತ್ತು. ಗಿರೀಶ್ ರವರು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರು. ಲಾರಿಯ ಪಾರ್ಕಿಂಗ್ ಇಂಡಿಕೇಟರ್ ಲೈಟ್ ಹಾಕಿರಲಿಲ್ಲ, ಗಿರೀಶ್ ರವರಿಗೆ ಲಾರಿ ಕಾಣದೆ ಲಾರಿಗೆ ಹೋಗಿ ಡಿಕ್ಕಿ ಪಡಿಸಿ ಅಪಘಾತವಾಗಿರುತ್ತದೆ.

ನಂತರ ನಾನು ಮತ್ತು ಚಾಸಾ 4 ರವರು ಸ್ಥಳಕ್ಕೆ ಹೋಗಿ ನೋಡಿದಾಗ ಗಿರೀಶ್ ರವರು ಧರಿಸಿದ್ದ ಹೆಲ್ಮೆಟ್ ಪುಡಿಯಾಗಿರುತ್ತದೆ ಹಾಗೂ ಗಿರೀಶ್ ರವರ ತಲೆಗೆ ತೀವ್ರ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಲಾರಿಯ ಚಾಲಕನ ಹೆಸರು ಕೇಳಿದಾಗ ಚಂದ್ರಪ್ಪ ಎಂದು ತಿಳಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯೇ ಸದರಿ ಚಂದ್ರಪ್ಪ ಆಗಿರುತ್ತಾರೆ. ಈ ಅಪಘಾತದ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿಕೆ

ನೀಡಿರುತ್ತೇನೆ. ಲಾರಿ ಮತ್ತು ಬೈಕ್ ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಪೋಟೋದಲ್ಲಿ ನೋಡಿ ಲಾರಿ, ಬೈಕ್ ಅನ್ನು ಗುರುತಿಸಿದರು.

<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಸಿ ಬಿ ವಕೀಲರಿಂದಃ</u>

ಚಾಸಾ 1 ರಿಂದ 4 ನನ್ನ ಸ್ನೇಹಿತರು. ಚಾಸಾ 6 ರಿಂದ 11 ರವರ ಪರಿಚಯ ಇದೆ. ನಾವುಗಳೆಲ್ಲ ಒಂದೇ ಊರಿನವರು ಹಾಗೂ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. ಚಾಸಾ ನಾನು ಮತ್ತು 1 ರಿಂದ 4 ಮತ್ತು 6 ರಿಂದ 11 ರವರುಗಳು ಪರಸ್ಪರ ಮಾತು ಕೇಳುತ್ತೇವೆ ಎಂದರೆ ಸರಿಯಲ್ಲ.

ನಾನು ಈಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಮೊದಲಿಗೆ ಇಲ್ಲಿಯೇ ಕಡೂರಿನಲ್ಲಿ ಟೈಲ್ಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು, ಮೃತ ಗಿರೀಶ್ ಜೊತೆಗೆ ಕೆಲಸ ಮಾಡುತ್ತಿದ್ದೆವು. ಪ್ರತಿ ದಿನ ನಾವು ಎಷ್ಟು ಗಂಟೆಗೆ ಮನೆಗೆ ಹೋಗುತ್ತಿದ್ದಿರಿ ಎಂದರೆ ಸಾಕ್ಷಿಯು ಒಂದೊಂದು ದಿನ ತಡವಾಗುತ್ತಿತ್ತು, ಒಂದೊಂದು ದಿನ 8 ಗಂಟೆಗೆ ಹೋಗುತ್ತಿದ್ದೆವು. ನನ್ನ ಬೈಕ್ ಸಂ.ಕೆಎ 18-4076 ಆಗಿರುತ್ತದೆ. ನನ್ನ ಬೈಕ್ ಸಂಖ್ಯೆ ಪೊಲೀಸರಿಗೆ ಹೇಳಿರುವುದಿಲ್ಲ. ನನಗೆ ಡಿಎಲ್ ಇದೆ ಹಾಗೂ ಗಾಡಿಗೆ ವಿಮೆ ಇದೆ, ಅದನ್ನು ಪೊಲೀಸರು ಕೇಳಿಲ್ಲ ನಾನು ನೀಡಿರುವುದಿಲ್ಲ.

ಲಾರಿಯು ರಸ್ತೆಯ ಪಕ್ಕದಲ್ಲಿ ಇತ್ತು ಎಂದರೆ ಸರಿಯಲ್ಲ. ರಸ್ತೆಯ ಮದ್ಯದಲ್ಲಿ ಇತ್ತು. ರಸ್ತೆಯು ಎಷ್ಟು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ರಸ್ತೆ ರಾಷ್ಟ್ರೀಯಾ ಹೆದ್ದಾರಿ ಎಂದರೆ ಸರಿ, ಅಲ್ಲಿ ವಾಹನ ದಟ್ಟಣೆ ಇದೆ ಎಂದರೆ ಸರಿ. ಒಂದು ವೇಳೆ ಲಾರಿಯು ರಸ್ತೆಯ ನಡುವೆ ನಿಂತರೆ ಯಾವುದೇ ವಾಹನಗಳು ಓಡಾಡಲು ಸಾದ್ಯವಿಲ್ಲ ಎಂದರೆ ಸಾಕ್ಷಿಯು ಆ ಕಡೆಯಿಂದ ಬರಲು ದಾರಿ ಖಾಲಿ ಇತ್ತು, ಇ ಕಡೆಯಿಂದ ಹೋಗುವ ರಸ್ತೆಯಲ್ಲಿ ಲಾರಿ ನಿಂತಿತ್ತು.

ಗಿರೀಶ್ ರವರು ಮುಂದೆ ಹೋದರು, ಅವರ ಹಿಂದೆ ನಾನು ನನ್ನ ಬೈಕಿನಲ್ಲಿ ಸುಮಾರು 200 ಮೀ ದೂರದಲ್ಲಿ ಹೋಗುತ್ತಿದ್ದೆ. ಆಗ ಕತ್ತಲೆ ಇತ್ತು ಎಂದರೆ ಸರಿ. ಯಾರ ತಪ್ಪಿನಿಂದಾಗಿ ಅಪಘಾತವಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಲಾರಿಯು ರಸ್ತೆ ಮದ್ಯ ನಿಂತಿದ್ದರಿಂದ ಅಪಘಾತವಾಗಿರುತ್ತದೆ. ನಾನು ಅಪಘಾತ

ನೋಡಿರುತ್ತೇನೆ. ನಾನು ಅಪಘಾತ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹೋಗುತ್ತಿರುವಾಗಲೇ ಗಿರೀಶ್ ರವರು ಡಿಕ್ಕಿಯಾಗಿ ಕೆಳಕ್ಕೆ ಬಿದ್ದಿದ್ದರು ನಾನು ಅಷ್ಟರಲ್ಲಿಯೇ ಹೋಗಿ ನೋಡಿರುತ್ತೇನೆ. ಗಿರೀಶ್ ರವರ ಬೈಕ್ ಎಷ್ಟು ವೇಗವಾಗಿ ಇತ್ತು ಎಂದರೆ ಅವರು ನಿಧಾನವಾಗಿ ಹೋಗುತ್ತಿದ್ದರು.

ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿ. ರಸ್ತೆಯಲ್ಲಿ ಲಾರಿಯು ಏಕೆ ನಿಂತಿರುತ್ತದೆ ಎಂದು ನಾನು ವಿಚಾರಿಸಿರುವುದಿಲ್ಲ.

ನಾನು, ಚಾಸಾ 1, 4 ಆ ದಿನ ಮದ್ಯಪಾನ ಮಾಡಿಕೊಂಡು ಒಂದೇ ಬೈಕಿನಲ್ಲಿ ಹೋಗಿ ಇಂಡಿಕೇಟರ್ ಹಾಕಿಕೊಂಡು ಫುಟ್ ಪಾತಿನಲ್ಲಿ ನಿಂತ್ತಿದ್ದ ಲಾರಿಗೆ ಡಿಕ್ಕಿ ಪಡಿಸಿಕೊಂಡು ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾವು ಪ್ರತ್ಯೇಕ ಬೈಕಿನಲ್ಲಿ ಹೋಗಿದ್ದ ಪಕ್ಷದಲ್ಲಿ ನಮ್ಮಗಳ ಬೈಕ್ ಸಂಖ್ಯೆಯನ್ನು ಸಹಃ ಪೊಲೀಸರು ಬರೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಗಿರೀಶ್ ರವರ ಅವರ ಅಜಾಗರುಕತೆಯಿಂದ ಹೋಗಿ ಫುಟ್‌ಪಾತ್ ನಲ್ಲಿ ನಿಂತ್ತಿದ್ದ ಲಾರಿಗೆ ಡಿಕ್ಕಿ ಪಡಿಸಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 1, 4 ರವರು ಪೊಲೀಸರ ಜೊತೆ ಷರಿಕ್ಕಾಗಿ ಮೃತನ ಕುಟುಂಬಕ್ಕೆ ವಿಮಾ ಪರಿಹಾರ ಸಿಗಲೆಂದು ಸುಳ್ಳು ದೂರು ದಾಖಲು ಮಾಡಿಸಿ ಅದಕ್ಕೆ ಪೂರಕವಾಗಿ ನಾವುಗಳು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಃದಃನ್ಯಾಃದಂ.,ರವರು, ಕಡೂರು.